1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

Spl.C. 23/2019

| | | |
|---|---|---|
| ಸಾಕ್ಷಿದಾರರ ಹೆಸರು | - ಬಿ. ಎನ್ ಮಂಜಪ್ಪ | ಪಿಡಬ್ಲೂ - 01 |
| ತಂದೆಯ ಹೆಸರು | - ನಾಗಪ್ಪ | ಸಿಡಬ್ಲೂ -01 |
| ವಯಸ್ಸು | - 36 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಬಂಕನಕಟ್ಟೆ | |

ದಿನಾಂಕಃ 19-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಚಾಸಾ-6 ನನ್ನ ತಾಯಿ, ಚಾಸಾ-2 ರಿಂದ 5 ಗೊತ್ತು. ನಾನು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವನು. ಆರೋಪಿ ಉಪ್ಪಾರ ಜನಾಂಗಕ್ಕೆ ಸೇರಿದವನು.

2. ಈಗ್ಗೆ 6 ವರ್ಷಗಳ ಹಿಂದೆ ಒಂದು ದಿನ ರಾತ್ರಿ 10.30 ರಿಂದ 11.00 ಗಂಟೆ ಸಮಯದಲ್ಲಿ, ನಾನು ನಮ್ಮ ಮನೆಯ ಪಕ್ಕದಲ್ಲಿರುವ ಪರಮೇಶ್ವರಪ್ಪ ಅವರ ಮನೆಯ ಮುಂದೆ ಫೋನಿನಲ್ಲಿ ಮಾತನಾಡುತ್ತಿದ್ದೆನು. ಆಗ ಯಾರೋ ನಾಯಿಗೆ ಹೊಡೆದಿದ್ದ ಕಲ್ಲು ಆರೋಪಿಯ ಮನೆಯ ಕಡೆ ಹೋಗಿ ಬಿದ್ದಿತ್ತು. ಆಗ ಆರೋಪಿ ಏಕಾಏಕಿ ನನ್ನ ಬಳಿ ಬಂದು ಯಾಕೆ ಕಲ್ಲು ಹೊಡೆದೆ ಎಂದು ಗಲಾಟೆ ಮಾಡಿ , ಮಾದಿಗ ಎಂದು ಕೆಟ್ಟ ಮಾತುಗಳಿಂದ ಬೈದನು. ಆಗ ನಾನು ಆರೋಪಿಯನ್ನು ಕುರಿತು ನಾನು ಕಲ್ಲಿನಿಂದ ಹೊಡೆದಿಲ್ಲ, ಫೋನಿನಲ್ಲಿ ಮಾತನಾಡುತ್ತಿದ್ದೆನು ಎಂದು ಹೇಳಿದೆನು, ಆಗ ಆರೋಪಿ ನೀನೇ

ಹೊಡೆದಿರುವುದು ಎಂದು ಹೇಳಿ, ಜಲ್ಲಿ-ಕಲ್ಲುಗಳ ಗುಡ್ಡೆಯ ಮೇಲಿದ್ದ ಒಂದು ದೊಣ್ಣೆಯನ್ನು ತೆಗೆದುಕೊಂಡು ನನಗೆ ಹೊಡೆಯಲು ಬಂದನು, ಆಗ ನಾನು ನನ್ನ ಬಲಗೈಯನ್ನು ಅಡ್ಡ ಹಿಡಿದಾಗ ದೊಣ್ಣೆಯ ಏಟು ನನ್ನ ಬಲಗೈಗೆ ಬಿದ್ದು ಪೆಟ್ಟಾಗಿ, ಮುರಿದು ಹೋಯಿತು. ನಂತರ ತರೀಕೆರೆಯಿಂದ ಜನರನ್ನು ಕರೆದುಕೊಂಡು ಬಂದು ನನಗೆ ಹೊಡೆಸುವುದಾಗಿ ಆರೋಪಿ ನನಗೆ ಕೊಲೆ ಬೆದರಿಕೆಯನ್ನು ಹಾಕಿದನು. ಅಷ್ಟರಲ್ಲಿ ನನ್ನ ತಾಯಿಯಾದ ಚಾಸಾ-6 ರವರು ಅಲ್ಲಿಗೆ ಬಂದು ನನ್ನನ್ನು ನಮ್ಮ ಮನೆಗೆ ಕರೆದುಕೊಂಡು ಹೋದರು. ಕೂಡಲೇ ಆಸ್ಪತ್ರೆಗೆ ಹೋಗಲು ಯಾವುದೇ ವಾಹನಗಳು ಲಭ್ಯವಿಲ್ಲದ ಕಾರಣ ಮಾರನೇ ದಿನ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಅಜ್ಜಂಪುರ ಪೊಲೀಸರಿಗೆ ಘಟನೆ ಬಗ್ಗೆ ಹೇಳಿಕೆಯನ್ನು ನೀಡಿದ್ದೇನೆ. ಸದರಿ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಹೇಳಿಕೆಯ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿ.ಪಿ.1 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

3. ಮೇಲೆ ಹೇಳಿದಂತೆ ಗಲಾಟೆಯಾದ 2 ದಿನಗಳ ಬಳಿಕ ನಾನು ಪೊಲೀಸರಿಗೆ ಸದರಿ ಹೇಳಿಕೆಯನ್ನು ನೀಡಿದ್ದೇನೆ. ಆರೋಪಿ ನನ್ನ ಮೇಲೆ ಹಲ್ಲೆ ಮಾಡಲು ಬಳಸಿದ ದೊಣ್ಣೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಒಂದು ಮರದ ದೊಣ್ಣೆಯನ್ನು ನೋಡಿ ಗುರುತಿಸಿ ಆರೋಪಿ ನನ್ನ ಮೇಲೆ ಹಲ್ಲೆ

ಮಾಡಲು ಬಳಸಿದ ದೊಣ್ಣೆ ಅದೇ ಎಂದು ನುಡಿದ ಮೇರೆಗೆ ಸದರಿ ದೊಣ್ಣೆಯನ್ನು ಮುದ್ದೆಮಾಲು-1 ಎಂದು ಗುರುತಿಸಲಾಯಿತು.

4. ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದಾಗ ನನ್ನ ಬಲಗೈ ಮೂಳೆ ಮುರಿದಿದ್ದರಿಂದ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿ ರಾಡನ್ನು ಹಾಕಿದ್ದಾರೆ.

5. ಆಸ್ಪತ್ರೆಯಿಂದ ಬಿಡುಗಡೆ ಆದ ಬಳಿಕ ತರೀಕೆರೆ ಡಿ ವೈ ಎಸ್ ಪಿ ಕಛೇರಿಗೆ ಹೋಗಿ ಘಟನೆ ಬಗ್ಗೆ ಮತ್ತೊಂದು ಬಾರಿ ಹೇಳಿಕೆಯನ್ನು ನೀಡಿದ್ದೇನೆ. ಅಲ್ಲಿ ಪೊಲೀಸರು ಮನೆಯಿಂದ ನಾನು ತೆಗೆದುಕೊಂಡು ಹೋಗಿ ಕೊಟ್ಟಿದ್ದ ದೊಣ್ಣೆಯನ್ನು ಇರಿಸಿ ಪೋಟೋವನ್ನು ತೆಗೆದುಕೊಂಡರು. ಸದರಿ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಅದನ್ನು ಮೇಲೆ ಹೇಳಿದಂತೆ ದೊಣ್ಣೆಯನ್ನು ಕೊಟ್ಟ ಸಮಯದಲ್ಲಿ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿ.ಪಿ. 2 ಎಂದು ಗುರುತಿಸಲಾಯಿತು.

6. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರಿ ದಾಖಲೆಯು ದಿನಾಂಕಃ 25-01-2019 ರಂದು ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಪಂಚನಾಮೆ ಆಗಿದ್ದು, ಅದನ್ನು ನಿ.ಪಿ. 3 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸದರಿ

ದಾಖಲೆಗೆ ನನ್ನೊಂದಿಗೆ ಚಾಸಾ-4 ಮತ್ತು 5 ರವರು ಸಹಿ ಮಾಡಿದ್ದಾರೆ. ಸದರಿ ದಾಖಲೆಯನ್ನು ಸಂಜೆ 4.30 ರಿಂದ 5.30 ರವರೆಗೆ ಪೊಲೀಸರು ಬರೆದುಕೊಂಡಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಭಾಗಶಃ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

7. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ನಿಮ್ಮ ಮೇಲೆ ಹಲ್ಲೆ ಮಾಡಿದ ದಿನಾಂಕಃ 29-11-2018 ಎಂದರೆ ಸರಿ. ಘಟನೆ ಬಗ್ಗೆ ದಿನಾಂಕಃ 01-12-2018 ರಂದು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಸಂಜೆ 5.00 ರಿಂದ 5.30 ಗಂಟೆಯವರೆಗೆ ಅಜ್ಜಂಪುರ ಪೊಲೀಸರು ನಿ.ಪಿ.1 ರಂತೆ ನಿಮ್ಮ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿ.

8. ದಿನಾಂಕಃ 25-01-2019 ರಂದು ನೀವು ಮುದ್ದೆ ಮಾಲು-1 ಎಂದು ಗುರುತಿಸಲ್ಪಟ್ಟಿರುವ ದೊಣ್ಣೆಯನ್ನು ತರೀಕೆರೆ ಡಿ ವೈ ಎಸ್ ಪಿ ರವರ ಕಛೇರಿಯಲ್ಲಿ ತನಿಖಾಧಿಕಾರಿಗಳಿಗೆ ಹಾಜರುಪಡಿಸಿದ್ದು ಅದನ್ನು ಅವರು ನಿಮ್ಮ , ಚಾಸಾ-4 ಮತ್ತು 5 ರವರ ಸಮಕ್ಷಮ ನಿ.ಪಿ.3 ರಂತೆ ಮಧ್ಯಾಹ್ನ 12.30 ರಿಂದ 1.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಐ ಎಸ್ ಟಿ ವಕೀಲರಿಂದಃ</u>

9. ನಮ್ಮ ಮನೆಯ ಎಲ್ಲಾ ವ್ಯವಹಾರಗಳನ್ನು ನಾನೇ ನೊಡಿಕೊಳ್ಳುತ್ತೇನೆ. ಹಾಗಾಗಿ ನಿಮಗೆ ಪ್ರಾಪಂಚಿಕ ಜ್ಞಾನ ಇದೆ ಎಂದರೆ ಸರಿ. ಬಂಕನಕಟ್ಟೆಯಲ್ಲಿ ಒಂದೇ ಜನಾಗಂದವರು ಒಂದು ಕಡೆ ವಾಸಿಸುತ್ತಿದ್ದೀರೆ ಎಂದರೆ ಸಾಕ್ಷಿ ಎಸ್ ಸಿ ಜಾತಿಗೆ ಸೇರಿದ ನಮ್ಮ ಕಾಲೋನಿಯ ಪಕ್ಕದ ರಸ್ತೆಯಲ್ಲಿರುವ ತನ್ನ ಜಮೀನಿನಲ್ಲಿ ಆರೋಪಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾನೆ ಎಂದು ಹೇಳಿರುತ್ತಾರೆ. ನಮ್ಮ ಮನೆಯಿಂದ ಆರೋಪಿಯ ಮನೆಗೆ 20 ಮೀಟರ್ ದೂರವಿದೆ. ನಮ್ಮ ಕಾಲೋನಿಯಲ್ಲಿ ಎಲ್ಲಾ ಕಡೆ ಮೊಬೈಲ್ ನೆಟ್‌ವರ್ಕ್ ಸಿಗುತ್ತದೆ. ನಮ್ಮ ತಾಯಿಗೆ ಗೊತ್ತಿಲ್ಲದ ಅಥವಾ ತಿಳಿಸಲಾಗಂತಹ ಕಳ್ಳತನ ಯಾವುದೇ ಕೆಟ್ಟ ಕೆಲಸವನ್ನು ನಾನು ಮಾಡಿಲ್ಲ.

10. ಘಟನೆ ನಡೆದಿದೆ ಎನ್ನಲಾದ ದಿನ ರಾತ್ರಿ 10.30 ರಿಂದ 11.00 ಗಂಟೆ ಸುಮಾರಿಗೆ ಮನೆಯಿಂದ ಹೊರ ಬಂದು ಫೋನಿನಲ್ಲಿ ಮಾತನಾಡಲು ಏನಾದರೂ ವಿಶೇಷ ಕಾರಣವಿತ್ತೆ ಎಂದರೆ ಸಾಕ್ಷಿ ನಮ್ಮ ತಂದೆ ಮಲಗಿದ್ದರಿಂದ ಅವರಿಗೆ ಕಿರಿ ಕಿರಿ ಆಗಬಾರದು ಎಂದು ಮನೆಯಿಂದ ಹೊರಗೆ ಬಂದು ಮಾತನಾಡುತ್ತಿದ್ದೆನು ಎನ್ನುತ್ತಾರೆ.

11. ತನಿಖಾಧಿಕಾರಿಗಳು ಸಲ್ಲಿಸಿರುವ ನಕ್ಷೆಯ ಪ್ರಕಾರ ಘಟನೆ ನಡೆದಿದೆ ಎನ್ನಲಾದ ಸ್ಥಳದಿಂದ 2 ಮನೆಗಳ ನಂತರದಲ್ಲಿ ವಿದ್ಯುತ್ ಕಂಬ ಇದೆ ಎಂದರೆ ಸಾಕ್ಷಿ ಪರಮೇಶ್ವರಪ್ಪ ಅವರ ಮನೆಯ ಪಕ್ಕದಲ್ಲಿ ಇದೆ ಎನ್ನುತ್ತಾರೆ. ಆಗಿದ್ದಲ್ಲಿ

ತನಿಖಾಧಿಕಾರಿಗಳು ತಲ್ಲಿಸಿರುವ ನಕ್ಷೆ ತಪ್ಪಾಗಿದೆಯೇ ಎಂದರೆ ಸಾಕ್ಷಿ ಸದರಿ ನಕ್ಷೆಯಲ್ಲಿ ತೋರಿಸಿರುವ ಮನೆ ನಿರ್ಮಿಸಲು ಹಾಕಿರುವ ಫೌಂಡೇಷನ್ ನಮ್ಮದು, ಅದರ ಪಕ್ಕದಲ್ಲಿ ಪರಮೇಶ್ವರಪ್ಪ ಅವರ ಮನೆ, ಅದರ ಪಕ್ಕ ವಿದ್ಯುತ್ ಕಂಬ ಇದೆ ಎನ್ನುತ್ತಾರೆ. ಸದರಿ ನಕ್ಷೆ ಸರಿಯಾಗಿದೆ ಎನ್ನುತ್ತಾರೆ.

12. ಘಟನೆ ನಡೆಯಿತು ಎನ್ನಲಾದ ಸ್ಥಳದಲ್ಲಿ ನಿಮ್ಮನ್ನು ಹೊರತುಪಡಿಸಿ ಬೇರೆ ಯಾರಾದರೂ ಇದ್ದರೇ ಎಂದರೆ ಸಾಕ್ಷಿ ನಾನು ಫೋನಿನಲ್ಲಿ ಮಾತನಾಡುತ್ತಿದ್ದುದರಿಂದ ಗಮನಿಸಿಲ್ಲ ಎನ್ನುತ್ತಾರೆ. ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಜರುಗಿಸಲಾಗಿದೆ ಎಂದು ಹೇಳಲಾದ ಸಮಯದಲ್ಲಿ ತೆಗೆದ ಫೋಟೋವನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ವಿದ್ಯುತ್ ಕಂಬ ಇರುವುದಾಗಲೀ ಅಥವಾ ಸ್ಥಳದಲ್ಲಿ ಯಾವುದೇ ವಿದ್ಯುತ್ ವ್ಯವಸ್ಥೆ ಇರುವ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ. ಆ ದಿನ ನಾನು ಮತ್ತು ನನ್ನ ತಾಯಿ ತರೀಕೆರೆಯಿಂದ ಹೊರಟು ರಾತ್ರಿ 7.30 ಗಂಟೆಗೆ ಮನೆಗೆ ವಾಪಾಸು ಬಂದಿದ್ದೆವು.

13. ನನ್ನ ಬಳಿ ಬೈಕ್ ಇಲ್ಲ. ನಮ್ಮ ಊರಿನಿಂದ 2 ರಿಂದ 3 ಕಿ ಮೀ ದೂರದಲ್ಲಿ ನಾರಣಾಪುರ ಗ್ರಾಮ ಇದೆ. ನಮ್ಮ ಊರಿನಲ್ಲಿ ನಮ್ಮ ಸಂಬಂಧಿಕರು ವಾಸವಾಗಿದ್ದಾರೆ. ಘಟನೆ ನಡೆದಿದೆ ಎನ್ನಲಾದ ಸಮಯದಲ್ಲಿ ನಿಮ್ಮ ಗ್ರಾಮದಲ್ಲಿ ಹಲವರ ಬಳಿ ಬೈಕು ಮತ್ತು ಇತರೆ ವಾಹನಗಳು ಇದ್ದವು ಎಂದರೆ ಸರಿ. ಘಟನೆ ನಡೆದಿದೆ ಎನ್ನಲಾದ ಸ್ಥಳ ಮತ್ತು ಸಮಯದಲ್ಲಿ ಕತ್ತಲೆ ಇತ್ತು ಎಂದರೆ ಸಾಕ್ಷಿ ಬೀದಿ ದೀಪದ ಬೆಳಕು ಇತ್ತು ಎನ್ನುತ್ತಾರೆ. ಸುಮಾರು ಕಾಲು ಗಂಟೆಯವರೆಗೆ ಜೋರಾಗಿ ಗಲಾಟೆ

ನಡೆದಿದೆ. ಗಲಾಟೆಯ ಶಬ್ದ ಕೇಳಿ ಅಕ್ಕಪಕ್ಕದ ಮನೆಯವರು ಬಂದರೇ ಎಂದರೆ ಸಾಕ್ಷಿ ಎಲ್ಲರೂ ಮಲಗಿದ್ದರಿಂದ ಬಂದಿಲ್ಲ ಎನ್ನುತ್ತಾರೆ.

14. ನಿಮ್ಮ ಗ್ರಾಮಕ್ಕೆ ಹತ್ತಿರವಿರುವ ಅಜ್ಜಂಪುರ, ತರೀಕೆರೆ, ಬೀರೂರು, ಕಡೂರು ಮತ್ತು ಸಖರಾಯಪಟ್ಟಣದಲ್ಲಿ ದಿನದ 24 ಗಂಟೆ ತೆರೆದಿರುವ ಸರ್ಕಾರಿ ಆಸ್ಪತ್ರೆಗಳು ಇವೆ ಎಂದರೆ ಸರಿ. ನಿಮ್ಮ ಗ್ರಾಮ ಅಥವಾ ಸುತ್ತಮುತ್ತಲಿನವರಿಗೆ ಏನಾದರೂ ವೈದ್ಯಕೀಯ ನೆರವು ಬೇಕಿದ್ದಲ್ಲಿ ನೀವು ಕೂಡಲೇ ಮೇಲೆ ಹೇಳಿದ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತೀರಿ ಎಂದರೆ ಸಾಕ್ಷಿ ನಾವು ಚಿಕ್ಕಮಗಳೂರಿನ ಆಸ್ಪತ್ರೆಗೆ ಹೋಗುತ್ತೇವೆ ಎನ್ನುತ್ತಾರೆ.

15. ಆರೋಪಿ ಕೇವಲ ಒಂದು ಬಾರಿ ನನಗೆ ಹೊಡೆದಿದ್ದಾನೆ. ಕಲ್ಲು ಯಾವ ದಿಕ್ಕಿನಿಂದ ಬಂದಿತ್ತು ಮತ್ತು ಆರೋಪಿಯ ಮನೆಯ ಯಾವ ಭಾಗಕ್ಕೆ ತಾಗಿತ್ತು ಎಂದು ನನಗೆ ಗೊತ್ತಿಲ್ಲ ಮತ್ತು ನಾನು ಆ ಬಗ್ಗೆ ಪೊಲೀಸರಿಗೆ ತಿಳಿಸಿಲ್ಲ. ನಿಮ್ಮ ಕೈಗೆ ಕಣ್ಣಿಗೆ ಕಾಣುವಂತಹ ಗಾಯವಾಗಿತ್ತೇ ಎಂದರೆ ಸಾಕ್ಷಿ ನನ್ನ ಬಲ ಕೈಯನ್ನು ನೆಲಕ್ಕೆ ಊರಿ ಏಳುವಾಗ ನೋವು ಕಾಣಿಸಿಕೊಂಡಿತ್ತು ಆ ನಂತರ ಊತ ಬಂದಿತ್ತು ಎನ್ನುತ್ತಾರೆ.

16. ಆರೋಪಿ ನನಗೆ ಹೊಡೆದಾಗ ಪರಮೇಶ್ವರಪ್ಪ ಅವರ ಮನೆಯ ಮುಂದಿನ ರಸ್ತೆಯ ಮೇಲೆ ಬಿದ್ದೆನು. ಸದರಿ ರಸ್ತೆ ಅಥವಾ ಗಲಾಟೆ ಆಯಿತು ಎಂದು ಹೇಳಲಾದ ಸ್ಥಳವು ಕೃತ್ಯ ನಡೆದ ಸ್ಥಳದಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸರು ಹಾಜರುಪಡಿಸಿರುವ ಫೋಟೋದಲ್ಲಿ ಕಂಡು ಬರುತ್ತದೆಯೇ

ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ, ಸಾಕ್ಷಿ ಮುಂದುವರಿದು ಸದರಿ ಫೋಟೋದಲ್ಲಿ ಕಂಡು ಬರುವ ಸ್ಥಳದಿಂದ ಸ್ವಲ್ಪ ದೂರದಲ್ಲಿ ಗಲಾಟೆಯಾದ ಸ್ಥಳ ಇದೆ ಎನ್ನುತ್ತಾರೆ.

17. ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಪಕ್ಕದಲ್ಲಿ ಚಪ್ಪಡಿ ಕಲ್ಲು ಇರುವುದು ಸದರಿ ಫೋಟೋದಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿಯು ನಮ್ಮ ಫೌಂಡೇಷನ್‌ಗೆ ಹೋಗಲು ಹಾಕಿರುವ ಕಲ್ಲು ಇರುತ್ತದೆ ಎನ್ನುತ್ತಾರೆ. ನಿಮಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸಾಕ್ಷಿಯು ಘಟನೆ ನಡೆದ ಸಮಯದಲ್ಲಿ ಇರಲಿಲ್ಲ, ಈಗ ಸೇವಿಸುತ್ತೇನೆ ಎನ್ನುತ್ತಾರೆ.

18. ನಿಮ್ಮ ಮತ್ತು ಆರೋಪಿಯ ನಡುವೆ ಯಾವುದಾದರೂ ಹಳೆಯ ದ್ವೇಷ ಅಥವಾ ಗಲಾಟೆ ಇತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ವಾಸವಿರುವ ಸ್ಥಳದಲ್ಲಿ ಯಾರೂ ಸಹಾ ಜಾಗವನ್ನು ಖರೀದಿ ಮಾಡಿಲ್ಲ, ಬದಲಿಗೆ ಗ್ರಾಮಠಾಣಾ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿದ್ದೀರಿ ಎಂದರೆ ಸರಿ.

19. ಸಾಮಾನ್ಯವಾಗಿ ನಿಮ್ಮ ಮನೆಗಳಲ್ಲಿ ಮಕ್ಕಳು ಬೆಳೆದು ಬೇರೆ ಹೋಗುವ ಸಂದರ್ಭದಲ್ಲಿ ನಿಮ್ಮ ಮನೆಯ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಳ್ಳುತ್ತೀರಿ ಎಂದರೆ ಸರಿ. ಆರೋಪಿ ತನ್ನ ಜಮೀನಿಗೆ ಬೇಲಿ ಹಾಕಿಕೊಂಡಿದ್ದರಿಂದ ಊರು ಮುಂದೆ ಬೆಳೆಯಲು ಅವಕಾಶವಿಲ್ಲದಂತಾಯಿತು ಎಂದರೆ ಸರಿ. ನೀವು ಹೇಳಿದ ದಿನಾಂಕ ಮತ್ತು ಸಮಯದಲ್ಲಿ ಆರೋಪಿ ನಿಮ್ಮ ಮೇಲೆ ಯಾವುದೇ ಗಲಾಟೆ ಮತ್ತು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

20. ನೀವು ಮಧ್ಯಪಾನ ಮಾಡಿ ಬಿದ್ದು ಪೆಟ್ಟು ಮಾಡಿಕೊಂಡಿದ್ದರಿಂದ ಗಲಾಟೆಯಾದ ದಿನಾಂಕ ಮತ್ತು ಸಮಯವನ್ನು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಲು ನಿಮಗೆ ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿಗೆ ಬಸ್ಸಿನ ಸೌಲಭ್ಯ ಇದೆ. ಬೆಳಿಗ್ಗೆ ಎದ್ದ ಕೂಡಲೇ ನೀವು ಬಸ್ಸಿನಲ್ಲಿ ಆಸ್ಪತ್ರೆಗೆ ಹೋಗಲು ಏನು ಸಮಸ್ಯೆ ಇತ್ತು ಎಂದರೆ ಸಾಕ್ಷಿ ಮೊದಲಿಗೆ ದೂರು ದಾಖಲಿಸಬೇಕು ಎಂದು ಅಜ್ಜಂಪುರ ಪೊಲೀಸ್ ಠಾಣೆಗೆ ಹೋಗಿ ನಂತರ ಆಸ್ಪತ್ರೆಗೆ ಹೋಗಿದ್ದೇನೆ ಎನ್ನುತ್ತಾರೆ. ಆಗ ನಾನು ಪೊಲೀಸ್ ಠಾಣೆಗೆ ಹೋದ ಸಮಯದಲ್ಲಿ ಪೊಲೀಸರು ಇದ್ದರು. ಆಗ ಸಮಯ ಬೆಳಿಗ್ಗೆ 10.00 ಗಂಟೆ ಆಗಿತ್ತು. ನಾನು ಅಲ್ಲಿಗೆ ಹೋಗಿದ್ದ ಬಾಬ್ತು ಪೊಲೀಸರು ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ.

21. ಅಜ್ಜಂಪುರ ಪೊಲೀಸರು ನಿಮ್ಮನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರೇ ಅಥವಾ ನೀವಾಗಿಯೇ ಅಜ್ಜಂಪುರ ಆಸ್ಪತ್ರೆಗೆ ಹೋದಿರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ತರೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ನುರಿತ ವೈದ್ಯರು ಲಭ್ಯವಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಚಿಕ್ಕಮಗಳೂರು ಜಿಲ್ಲಾ ಆಸಪತ್ರೆಗೆ ಹೋಗುವ ಪೂರ್ವದಲ್ಲಿ ನಾನು ಯಾವುದೇ ಆಸ್ಪತ್ರೆಗೆ ಹೋಗಿಲ್ಲ ಮತ್ತು ಪ್ರಥಮ ಚಿಕಿತ್ಸೆಯನ್ನು ಪಡೆದಿಲ್ಲ. ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಹೋಗುವ ಪೂರ್ವದಲ್ಲಿ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ ಬಗ್ಗೆ ನಾನು ಯಾರಿಗೂ ತಿಳಿಸಿರಲಿಲ್ಲ. ಸದರಿ ಆಸ್ಪತ್ರೆಯಲ್ಲಿ ನನಗೆ ಹಲ್ಲೆ ಮಾಡಲಾಗಿದೆ ಎಂದು ತಿಳಿಸಿದ್ದೇನೆ ಆದರೆ ಯಾರು ಹಲ್ಲೆ ಮಾಡಿದರು ಎಂದು ತಿಳಿಸಿಲ್ಲ.

22. ನನ್ನ ತಾಯಿ ನನ್ನನ್ನು ಕರೆದುಕೊಂಡು ಹೋಗಲು ಬಂದಾಗ ಆರೋಪಿ ನಮ್ಮ ಮನೆಯ ಹೊರಗೆ ಇದ್ದನು. ಹಲ್ಲೆಯಾದ ಬಳಿಕ ಮುದ್ದೆಮಾಲು-1 ರ ದೊಣ್ಣೆ ಎಲ್ಲಿ ಇತ್ತು , ಯಾವ ವಶದಲ್ಲಿ ಇತ್ತು, ಅದನ್ನು ಯಾರು ತೆಗೆದುಕೊಂಡು ಬಂದು ಇರಿಸಿದ್ದರು ಮತ್ತು ಎಲ್ಲಿ ಇರಿಸಿದ್ದರು ಎಂದು ನೀವು ಪೊಲೀಸರಿಗೆ ನೀಡಿದ ದೂರು ಅಥವಾ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಸದರಿ ದೊಣ್ಣೆಯನ್ನು ಹಾಜರುಪಡಿಸುವಂತೆ ಪೊಲೀಸರು ನಿಮಗೆ ನೋಟೀಸನ್ನು ಕೊಟ್ಟಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ದೊಣ್ಣೆಯನ್ನು ಹಾಜರುಪಡಿಸುವ ಸಂದರ್ಭದಲ್ಲಿ ಚಾಸಾ-4 ಮತ್ತು 5 ರವರನ್ನು ನಾನೇ ಕರೆದುಕೊಂಡು ಹೋಗಿದ್ದೆನು. ಆ ಸಮಯದಲ್ಲಿ ಪೊಲೀಸರು ಏನೇನು ಬರೆದುಕೊಂಡರು ಎಂದರೆ ಸಾಕ್ಷಿ ನಾನು ಕೊಟ್ಟ ಹೇಳಿಕೆಯನ್ನು ಬರೆದುಕೊಂಡಿದ್ದಾರೆ ಎನ್ನುತ್ತಾರೆ. ನಿ.ಪಿ.3 ರಲ್ಲಿರುವ ಸಹಿಯನ್ನು ತೋರಿಸಿ ಅದು ನಿಮ್ಮ ಹೇಳಿಕೆ ಎಂದು ಪೊಲೀಸರು ನಿಮ್ಮ ಸಹಿಯನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

23. ಗಲಾಟೆಯಾದ ದಿನಾಂಕಃ 29-11-2018 ಆಗಿತ್ತು. ಪೊಲೀಸರಿಗೆ ಎರಡನೇ ಹೇಳಿಕೆಯನ್ನು ನೀಡಿದ ದಿನಾಂಕವನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನಾನು ಆಸ್ಪತ್ರೆಯಿಂದ ಬಿಡುಗಡೆಯಾದ 25 ದಿನಗಳ ಬಳಿಕ ನೀಡಿದ್ದೇನೆ ಎನ್ನುತ್ತಾರೆ.

24. ಯಾವ ಪದಗಳನ್ನು ಬಳಸಿ ಆರೋಪಿ ನಿಮ್ಮ ಜಾತಿಯನ್ನು ನಿಂದಿಸಿದನು ಎಂದು ದೂರಿನಲ್ಲಿ ಅಥವಾ

ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಮ್ಮ ಜಾತಿಗೆ ಅವಹೇಳನವಾಗುವಂತಹ ಯಾವುದೇ ಪದಗಳನ್ನು ಆರೋಪಿ ಬಳಸಿದ್ದ ಬಗ್ಗೆ ದೂರು ಅಥವಾ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಜಾತಿಯನ್ನು ಹಿಡಿದು ನಿಂದಿಸಿದನು ಎಂದು ಹೇಳಲಾದ ಸಮಯದಲ್ಲಿ ಬೇರೆ ಯಾರೂ ಇರಲಿಲ್ಲ ಮತ್ತು ಅದನ್ನು ಯಾರೂ ನೋಡಿಲ್ಲ. ನಿಮಗೆ ಯಾವುದೋ ರೀತಿ ಆದ ಗಾಯವನ್ನು ಬಳಸಿಕೊಂಡು ಆರೋಪಿಯನ್ನು ಆತನ ಜಾಗದಿಂದ ಖಾಲಿ ಮಾಡಿಸುವ ಉದ್ದೇಶದಿಂದ ಆತನ ವಿರುದ್ಧ ಸುಳ್ಳು ದೂರನ್ನು ನೀಡಿ, ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

25. ಚಾಸಾ-3 ನಮ್ಮ ಗ್ರಾಮದವರು ಮತ್ತು ನನ್ನ ಸ್ನೇಹಿತ ಆದರೆ ಸಂಬಂಧಿ ಅಲ್ಲ. ಚಾಸಾ-4 ರವರು ವಾರ್ತಾ ಪತ್ರಿಕೆಯ ವರದಿಗಾರರು ಎಂದರೆ ಸರಿ. ನೀವು , ಚಾಸಾ-3 ಮತ್ತು ಚಾಸಾ-4 ರವರು ಆರೋಪಿಯ ವಿರುದ್ಧ ಪಿತೂರಿ ನಡೆಸಿ ಆತನ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಮುದ್ದೆಮಾಲು-1-ದೊಣ್ಣೆಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ದೊಣ್ಣೆಯನ್ನು ನೀವು ಹೇಳಿದಂತೆ ಯಾವುದೇ ಕೃತ್ಯದಲ್ಲಿ ಬಳಸಲಾಗಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1 ರ ತರಹದ ದೊಣ್ಣೆಯನ್ನು ಗುದ್ದಲಿ ಅಥವಾ ಹಾರೆಗೆ ಕಾವನ್ನು ಹಾಕಲು ಬಳಸಲಾಗುತ್ತದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದೊಣ್ಣೆ ಯಾವ ಜಾತಿಯದ್ದು ಎಂದು ನನಗೆ ಗೊತ್ತಿಲ್ಲ. ನೀವು

ಹೇಳಿದಂತೆ ಆರೋಪಿ ನಿಮ್ಮ ಮೇಲೆ ಗಲಾಟೆ ಮಾಡಿಲ್ಲ, ನಿಮ್ಮ ಜಾತಿಯನ್ನು ಹಿಡಿದು ನಿಂದಿಸಿಲ್ಲ, ನಿಮ್ಮ ಮೇಲೆ ಯಾವುದೇ ರೀತಿ ಹಲ್ಲೆ ಮಾಡಿಲ್ಲ, ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿ